೫) ಅನಧಿಕೃತ ಬೆಳವಣಿಗೆಗಳನ್ನು ತೆರವುಗೊಳಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಲ್ಲಿ ಅವಕಾಶವಿದೆ. ಅದರಂತೆ ಕ್ರಮ ಕೈಗೊಳ್ಳಲಾಗುವುದು.

ಕಾರ್ಕಳ ಪುರಸಭೆಯಲ್ಲಿ ಒಳಚರಂಡಿ ವ್ಯವಸ್ಥೆ

2653 (3049) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಾರ್ಕಳ ಪುರಸಭೆಗೆ ಕೆಲವು ವರ್ಷಗಳ ಹಿಂದೆ ಮಂಡಳಿಯ ವತಿಯಿಂದ ಒಳಚರಂಡಿ ಕಾಮಗಾರಿ ಮಾಡಿದ್ದು ಅದು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸದೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಈ ದುರವ್ಯವಸ್ಥೆಯ ಒಳಚರಂಡಿ ಪೈಪುಗಳು ಮ್ಯಾನ್‌ಹೋಲ್‌ಗಳು ಸೋರುತ್ತಿದ್ದು, ಕೊಳಕು ನೀರೆಲ್ಲ ನದಿಗೆ ಸೇರಿ ನದಿಯೇ ಕಲುಷಿತವಾಗುತ್ತಿದ್ದು ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :—

1. ಬಂದಿದೆ.

2. ಕಾರ್ಕಳ ಒಳಚರಂಡಿ ಯೋಜನೆಯನ್ನು 1993ರಲ್ಲಿ ಪಾಲನೆಗೊಳಿಸಿದ್ದು, ಪುರಸಭೆಗೆ ನಿರ್ವಹಣೆಗೆ ಹಸ್ತಾಂತರಿಸಲಾಗಿದ್ದು, ಹಾಲಿ ಪುರಸಭೆಯವರೇ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಿಸುತ್ತಿರುತ್ತಾರೆ. 1995ನೇ ಇಸವಿಯಲ್ಲಿ ಅಂದಿನ ಮುಖ್ಯಮಂತ್ರಿಗಳು ಮಂಡಳಿಯ ಅಧಿಕಾರಿಗಳೊಂದಿಗೆ ಜಂಟಿ ಪರಿವೀಕ್ಷಣೆ ನಡೆಸಿ, ಮ್ಯಾನ್‌ಹೋಲ್‌ಗಳನ್ನು ದುರಸ್ಥಿಗೊಳಿಸುವ ಹಾಗೂ 350 ಮತ್ತು 500 ಮಿ.ಮಿ.ವ್ಯಾಸದ ಆರ್.ಸಿ.ಸಿ. ಗ್ರಾಮ ಸಾರ ಪೈಪುಗಳ ಜೋಡಣೆಯನ್ನು ಸ್ಥಳಾಂತರಿಸುವ ಕಾಮಗಾರಿಯನ್ನು ರೂ.30,000.00 ವೆಚ್ಚದಲ್ಲಿ ಕೈಗೊಂಡು ಏಪ್ರಿಲ್ 97ರಲ್ಲಿ ಪೂರ್ಣಗೊಳಿಸಿ ಗ್ರಾಮಸಾರವನ್ನು ಆಕ್ಸಿಡೇಷನ್ ಪಾಂಡ್‌ರವರೆಗೆ ಸರಾಗವಾಗಿ ಹರಿಯುವಂತೆ ಮಾಡಲಾಯಿತು.

ಆಕ್ಸಿಡೇಷನ್ ಪಾಂಡನ್ನು ಸೇರುವ 500 ಮಿ.ಮಿ. ವ್ಯಾಸದ ಕೊಳವೆಯು ಗದ್ದೆಗಳ ಮುಖಾಂತರ ಹಾದು ಹೋಗಿದ್ದು, ಸ್ಥಳೀಯ ರೈತರು ಹಾಗೂ ಇತರರು ಈ ಪೈಪುಗಳನ್ನು ಒಡೆದು ಗದ್ದೆಗೆ ಗ್ರಾಮಸಾರವನ್ನು ಹಾಯಿಸಿರುವುದರಿಂದ, ಅಲ್ಲಲ್ಲಿ, ಸೋರುವಿಕೆ ಉಂಟಾಗಿರುತ್ತದೆ. ಇದನ್ನು ಸರಿಪಡಿಸುವ ಸಲುವಾಗಿ ರೂ.9.70 ಲಕ್ಷಗಳ ಅಂದಾಜನ್ನು ತಯಾರಿಸಿ ಮಂಡಳಿಯ ಮಂಗಳೂರು ವಿಭಾಗದಿಂದ ಕಾರ್ಕಳ ಪುರಸಭೆಗೆ

9.7.99ರಲ್ಲಿ ಕಳುಹಿಸಲಾಗಿದೆ. ಸದರಿ ಅಂದಾಜಿನ ಮೊತ್ತವನ್ನು ಪುರಸಭೆಯು ಮಂಡಳಿಗೆ ಠೇವಣಿ ಮಾಡಿದ ನಂತರ ಈ ಕಾಮಗಾರಿಯನ್ನು ಕೈಗೊತ್ತಿಕೊಳ್ಳಲಾಗುವುದು.

ಮಂಗಳೂರು, ಉಡುಪಿ ಜಿಲ್ಲೆಗಳಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

2654 (3050) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಉಡುಪಿ ಮತ್ತು ಮಂಗಳೂರು ಜಿಲ್ಲೆಯಲ್ಲಿನ ವಿದ್ಯಾರ್ಥಿನಿಲಯ ಮೇಲ್ವಿಚಾರಕರ, ಅಡಿಗೆಯವರ ಮತ್ತು ಕಾವಲುಗಾರರ ಹುದ್ದೆಗಳೆಷ್ಟು? ಅವುಗಳಲ್ಲಿ ತೆರವಾಗಿರುವ ಹುದ್ದೆಗಳೆಷ್ಟು. (ತಾಲ್ಲೂಕುವಾರು ಒದಗಿಸುವುದು)

ಆ) ಇವುಗಳನ್ನು ಭರ್ತಿ ಮಾಡಲು ಅಥವಾ ತಾತ್ಕಾಲಿಕವಾಗಿಯಾದರೂ ತುಂಬಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಪರಿಶಿಷ್ಟ ವರ್ಗಗಳ ಇಲಾಖೆ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ಉಡುಪಿ ಹಾಗೂ ಮಂಗಳೂರು ಜಿಲ್ಲೆಗಳಲ್ಲಿರುವ ವಿದ್ಯಾರ್ಥಿನಿಲಯಗಳಲ್ಲಿರುವ ನಿಲಯ ಮೇಲ್ವಿಚಾರಕರು, ಅಡಿಗೆಯವರು ಅಡಿಗೆ ಸಹಾಯಕರು, ಮತ್ತು ಕಾವಲುಗಾರರ ಹುದ್ದೆಗಳ ವಿವರ ಹಾಗೂ ಅವುಗಳಲ್ಲಿ ತೆರವಾಗಿರುವ ಹುದ್ದೆಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ-1, 2, 3, ಮತ್ತು 4ರಲ್ಲಿ ಲಗತ್ತಿಸಲಾಗಿದೆ.

ಆ) ಗ್ರೂಪ್ 'ಸಿ' ಹುದ್ದೆಗಳಾದ ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಸರ್ಕಾರದ ಪತ್ರ ಸಂಖ್ಯೆ: ಎಸ್‌ಡಬ್ಲ್ಯೂಡಿ 380 ಎಸ್‌ಇಟಿ 98: ದಿನಾಂಕ: 18-7-2001ರಲ್ಲಿ ಸರ್ಕಾರವು ಅನುಮತಿ ನೀಡಲಾಗಿದ್ದು, ಈ ಹುದ್ದೆಗಳನ್ನು ಆದಷ್ಟು ಬೇಗ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಹಾಲಿ ಈ ಹುದ್ದೆಗಳನ್ನು ತಾತ್ಕಾಲಿಕವಾಗಿ ಶಿಕ್ಷಣ ಇಲಾಖೆಯ ಶಿಕ್ಷಕರನ್ನು ಹೆಚ್ಚಿನ ಪ್ರಭಾರದಲ್ಲಿ ಇರಿಸಲು ಸೂಚನೆ ನೀಡಿದ್ದು, ಆಯಾ ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.